ಮೇಲೆ ಸಹಜವಾಗಿ ನಾವು ನ್ಯಾಯಾಲಯದ ಸೂಚನೆಗಳನ್ನು ಅನುಸರಿಸಲೇಬೇಕಾಗುತ್ತದೆ. ಆ ಕಾರಣಕ್ಕಾಗಿ ಸ್ವಲ್ಪ ತಡವಾಯಿತು. ಮತ್ತೆ ಈಗ ಗವರ್ನಿಂಗ್ ಕೌನ್ಸಿಲ್ ಕೂಡ ಮಾಡುತ್ತಿದ್ದೇವೆ. ನಾನೂ ಕೂಡ ವಾದ ಮಾಡಬೇಕೆಂದು ನಿಂತಿಲ್ಲ, ಆದರೆ ಅದನ್ನು ಉತ್ತಮ ಪಡಿಸಲು ಏನೆಲ್ಲಾ ಮಾರ್ಗಗಳು ಇವೆ ಅದನ್ನೆಲ್ಲಾ ಖಂಡಿತವಾಗಿ ನಮ್ಮ ಸರ್ಕಾರ ಪ್ರಾಮಾಣಿಕವಾಗಿ ಮಾಡುತ್ತದೆ ಎಂದು ಹೇಳುತ್ತೇನೆ.

(2) ಮಾಗಡಿ ತಾಲ್ಲೂಕು ಮಾಡಬಾಳ ಹೋಬಳಿ ಅವ್ವೇರಹಳ್ಳಿ ಗ್ರಾಮದ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸರ್ಕಾರ ಮಂಜೂರು ಮಾಡಿರುವುದರಿಂದ ರೈತರಿಗೆ ತೊಂದರೆ

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾಗಡಿ ತಾಲ್ಲೂಕು ಮಾಡಬಾಳ್ ಹೋಬಳಿ ಅವ್ವೇರಹಳ್ಳಿ ಗ್ರಾಮದ ಜಮೀನುಗಳನ್ನು ಕೈಗಾರಿಕಾ ಉದ್ದೇಶಕ್ಕಾಗಿ ಸರ್ಕಾರ ಮಂಜೂರು ಮಾಡಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ ಹಾಗೂ ಈ ಕೈಗಾರಿಕಾ ಘಟಕಗಳಿಂದ ಮಂಚನಬೆಲೆ ಜಲಾಶಯದಿಂದ ಮಾಗಡಿ ಟೌನ್‌ಗೆ ಒದಗಿಸುವ ಕುಡಿಯುವ ನೀರು ಕಲುಷಿತ ಹಾಗೂ ಪರಿಸರ ಮಾಲಿನ್ಯ ಉಂಟಾಗುವ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯ ತೀರ್ಮಾನದಂತೆ ಮೆ: ಬಿಗ್‌ಬಾಸ್ ಅಡ್ವೆಂಚರ್ಸ್ ಹಾಲಿಡೇ ರೆಸಾರ್ಟ್ಸ್ ಲಿ. ಕಂಪನಿಯವರ ನೈಸರ್ಗಿಕ ಮತ್ತು ಕೃತಕ ಮಿನರಲ್ ವಾಟರ್ ತಯಾರಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಾಡಬಾಳ ಹೋಬಳಿಯ ಅವ್ವೇರಹಳ್ಳಿ ಗ್ರಾಮದಲ್ಲಿ 68.17 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಕಾಯ್ದೆಯನ್ವಯ ಪ್ರಾರಂಭಿಕ ಅಧಿಸೂಚನೆ ಹೊರಡಿಸಿ, ಈ ಜಮೀನಿನಲ್ಲಿ 18.17 ಎಕರೆ ಖಾಸಗೀ ಜಮೀನಾಗಿದ್ದು, ಬಾಕಿ 50 ಎಕರೆ ಜಮೀನು ಸ.ನಂ.15ರಲ್ಲಿರುವ ಸರ್ಕಾರಿ ಖರಾಬ್ ಜಮೀನಾಗಿರುತ್ತದೆ. ಸಂಬಂಧಪಟ್ಟ ರೈತರಿಗೆ ಭೂಸ್ವಾಧೀನ ಬಗ್ಗೆ ತಿಳುವಳಿಕೆ ನೋಟೀಸ್ ನೀಡಲಾಗಿದ್ದು, ಅದಕ್ಕೆ ಅವರಿದ ಆಕ್ಷೇಪಣೆಗಳು ಬಂದಿವೆ. ಇದರ ಬಗ್ಗೆ ವಿಚಾರಣೆ ನಡೆಸುತ್ತಿದ್ದು, ವಿಚಾರಣಾ ವರದಿ ಬಂದ ನಂತರ ಸರ್ಕಾರವು ಪರಿಶೀಲಿಸಿ, ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಈಗ ರೈತರ ಜಮೀನನ್ನು ಅಕ್ವೈರ್ ಮಾಡಿದ್ದೇವೆ ಬಾಕಿದು ಸರ್ಕಾರಿ ಜಮೀನು ಎಂದು ಹೇಳಿದ್ದಾರೆ. ಆ ಸರ್ಕಾರಿ ಜಮೀನಿನಲ್ಲಿ ರೈತರು ಹಲವಾರು ವರ್ಷಗಳಿಂದ ಹೊಲ ಉತ್ತುಕೊಂಡು ಬಂದಿದ್ದಾರೆ. ಮತ್ತು ಲ್ಯಾಂಡ್ ಗ್ರ್ಯಾಂಟ್ ಮುಂದೆ ಅಪರ ಫೈಲ್ ಪೆಂಡಿಂಗ್ ಇದೆ. ಇನ್ನು ಸರ್ಕಾರದಿಂದ ಮಂಚನಬೆಲೆ ಜಲಾಶಯ ಕಟ್ಟುತ್ತಿದ್ದಾರೆ. ಆದರಿಂದ ಮಾಗಡಿ ಟೌನ್‌ಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆಯಾಗುತ್ತಿದೆ. ಆದ್ದರಿಂದ ಅದಕ್ಕೆ ತೊಂದರೆಯಾಗುತ್ತಿರುವುದರಿಂದ

ತಮಗೆ ಪಲ್ಯೂಷನ್ ಕಂಟ್ರೋಲ್ ಬೋರ್ಡಿನಿಂದ ಕ್ಲಿಯರನ್ಸ್ ಸಿಕ್ಕಿದೆಯೇ ಅಥವಾ ಲೋಕಲ್ ತಹಸೀಲ್ದಾರ್‌ರವರಿಂದ ನಿಮಗೆ ಏನಾದರೂ ಮಾಹಿತಿ ಇದೆಯೇ ಅಕ್ಸೆಪ್ಟ್ ಮಾಡುವುದಕ್ಕೆ? ಏನೂ ಇಲ್ಲದೆ ನೀವು ಏಕಾಏಕಿ ಅದನ್ನು ಅಕ್ಸೆಪ್ಟ್ ಮಾಡಿದರೆ ಎಷ್ಟು ಜನಗಳಿಗೆ ತೊಂದರೆಯಾಗುತ್ತದೆ.

4.50 ಪಿ.ಎಂ.

ದಯಮಾಡಿ ಮಂತ್ರಿಗಳು ಇದನ್ನು ಸ್ಪಷ್ಟಪಡಿಸಬೇಕು. ಇದರಲ್ಲಿ ಯಾರ ಕೈವಾಡ ಇದೆ ಎಂದು ಮತ್ತು ಈ ತಕ್ಷಣ ಆ ಕಾರ್ಯಕ್ರಮವನ್ನು ನಿಲ್ಲಿಸಿ ರೈತರಿಗೆ ಮತ್ತು ಕುಡಿಯುವ ನೀರಿಗೆ ತೊಂದರೆಯಾಗುತ್ತದೆ ಎಂದು ಅವರಿಗೆ ತಿಳಿಸಬೇಕು ಎಂದು ತಮ್ಮ ಮೂಲಕ ಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಛಿಪಡುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ: ಭೂಮಿ ಇನ್ನು ಸ್ವಾಧೀನವಾಗಿಲ್ಲ, 28:1 ಯಾವುದೇ ಭೂಮಿಯನ್ನು ಸ್ವಾಧೀನ ಮಾಡುವುದಕ್ಕಿಂತ ಮುಂಚೆ ಸಿಂಗಲ್ ವಿಂಡೋ ಎಜೆನ್ಸಿಯಲ್ಲಿ ಅವರು ಆ ಪ್ರಾಜೆಕ್ಟ್‌ಅನ್ನು ಕ್ಲಿಯರ್ ಮಾಡಿದ ನಂತರ ಕರ್ನಾಟಕ ಅಭಿವೃದ್ಧಿ ಮಂಡಳಿಯಲ್ಲಿ ಅವರು ಸ್ವಾಧೀನ ಪ್ರಾರಂಭ ಮಾಡುತ್ತಾರೆ. 28:1 ಎಂದು ಆಗಿದೆ. ಜೆ.ಎಮ್.ಸಿ 28 ಈಗ ನಡೀತಾ ಇದೆ. ಇಲ್ಲಿ ಈಗ ಮುಖ್ಯವಾಗಿ 18 ಎಕರೆ ಜಮೀನು ರೈತರದ್ದು, 50 ಎಕರೆ ಜಮೀನು ಸರ್ಕಾರದ್ದು, ಅದನ್ನು ಈಗಾಗಲೇ ಗಮನಕ್ಕೆ ತಂದಿದ್ದಾರೆ. ಕೆಲವು ಜನ ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡಿದ್ದಾರೆ. ಬಗೆರ್ ಹುಕಂ ಸಾಗುವಳಿ ಸರ್ಕಾರ ಏನು ಮಂಜೂರು ಮಾಡುತ್ತದೆ, ಅಲ್ಲಿಯು ಅರ್ಜಿ ಹಾಕಿದ್ದಾರೆ ಎಂದು ಹೇಳಿದ್ದಾರೆ. ನಾವು ಏನು ಮಾಡಿದ್ದೇವೆ ಎಂದರೆ ಈಗಾಗಲೆ ನಮ್ಮ ಡೈರೆಕ್ಟರ್ ಆಫ್ ಇಂಡಸ್ಟ್ರೀಯವರಿಗೆ ನಿರ್ದೇಶನ ಕೊಟ್ಟಿದ್ದೇವೆ. 1-9-97ರಂದು ಅವರು ಆ ಸ್ಥಳದ ಭೇಟಿ ಮಾಡಿ ಸರ್ಕಾರಕ್ಕೆ ವರದಿ ಕೊಡುತ್ತಾರೆ. ಆ ವರದಿ ಮೇಲೆ ಸರ್ಕಾರ ನಿರ್ಣಯ ತೆಗೆದುಕೊಳ್ಳುತ್ತದೆ ಇದು ಒಂದು. ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ, ನಮ್ಮ ಪ್ರಾಜೆಕ್ಟ್ ಏನು ಅದರ ಕ್ಲಿಯರೆನ್ಸ್ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರು ಮಾಡಬೇಕು, ಹಾಗೆ ಅವರು ಮಾಡದಿದ್ದರೆ ಅದು ಪ್ರಾಜೆಕ್ಟ್ ಆಗಲು ಸಾಧ್ಯವಿಲ್ಲ. ಹಾಗೆ ಯಾವುದೇ ಪ್ರಾಜೆಕ್ಟ್ ಕ್ಲಿಯರ್ ಆಗಬೇಕಾದರೆ It is subject to the clearance of the Pollution Control Board. ಹಾಗಾಗಿ ಈ ಸಂದೇಹ, ಸಂಶಯ ತಮ್ಮ ಮನಸ್ಸಿನಲ್ಲಿ ಇರುವುದು ಬೇಡ, ಎರಡನೆಯದು ತಾವು ಕೆಲವು ಜನರ ಹೆಸರನ್ನು ಹೇಳಿದ್ದೀರಿ ಅವರು ಮತ್ತು ಈ ಕಂಪನಿಗಳ ಸಂಬಂಧ ನನಗೆ ಗೊತ್ತಿಲ್ಲ. ನನ್ನ ರಿಕಾರ್ಡ್ಸ್ ಪ್ರಕಾರ ಅವರ ಮತ್ತು ಈ ಕಂಪನಿಯ ಯಾವ ಸಂಬಂಧ ಇಲ್ಲ. ಆ ಕಂಪನಿಯ ಮಾಲೀಕ ಯಾರು ಇದ್ದಾನೆ ಅವನು ಆ ಸಂಬಂಧ ಇಟ್ಟುಕೊಳ್ಳಲು ಬರುವುದಿಲ್ಲ. ಕೈಗಾರಿಕೆಯನ್ನು ನಾವು ಪ್ರಾರಂಭ ಮಾಡುವಾಗ ಮಾಲೀಕ ಯಾರು ಎಂದು ನಾವು ಚಿಂತನೆ ಮಾಡುವುದಿಲ್ಲ. ಕಾಯಿದೆ ಕಾನೂನು ಪ್ರಕಾರ ಸರಿಯಾಗಿ ಅರ್ಜಿ

ಕೊಟ್ಟರೆ ಅವರಿಗೆ ಏನು ಬೇಕು ಆ ಮೂಲಭೂತ ಸೌಕರ್ಯಗಳನ್ನು ನಾವು ಕೊಡುತ್ತೇವೆ. ಆದರೆ ಒಂದು ಮಾತು ಬಡ ರೈತರಿಗೆ ತೊಂದರೆ ಕೊಟ್ಟು ಸರ್ಕಾರ ಯಾವುದೇ ಕೆಲಸ ಮಾಡಲು ಇಚ್ಛಿಪಡುವುದಿಲ್ಲ. ಎರಡನೆಯದು ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಕ್ಲೀಯರೆನ್ಸ್ ಕೊಟ್ಟ ಮೇಲೆ ಈ ಪ್ರಾಜೆಕ್ಟ್ ಬರುತ್ತದೆ. ಇನ್ನು ಈ ಭೂಮಿಯನ್ನು ನಾವು ಸ್ವಾಧೀನಪಡಿಸಿಕೊಂಡಿಲ್ಲ, ಡೈರೆಕ್ಟರ್ ಹೋಗಿ ಭೇಟಿ ಕೊಟ್ಟು ವರದಿಯನ್ನು ಕೊಟ್ಟ ಮೇಲೆ ನಾನು ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್.ಎನ್.ನಂಜೇಗೌಡ: ನಾನು ಒಂದು ಚಿಕ್ಕಮಗಳೂರಿನಲ್ಲಿ ಮಿನರಲ್ ವಾಟರ್ ಮಾಡುವುದನ್ನು ನೋಡಿಕೊಂಡು ಬಂದಿದ್ದೇನೆ. 68 ಎಕರೆ ಜಮೀನು ಏಕೆ ಬೇಕು, ದೇಶಪಾಂಡೆಯವರೇ, ಒಂದು ಎಕರೆ ಸಾಕು. ಯಾರು ಖಾಸಗಿಯವರು ಮಿನರಲ್ ವಾಟರ್ ಮಾಡಿ ದುಡ್ಡು ಮಾಡುತ್ತಾನೆ, ಮಾಡಲಿ, ಮಿನರಲ್ ವಾಟರ್ ಇವತ್ತು ಡಿಮಾಂಡ್ ಇದೆ ಅವನು ಮಾರ್ಕೆಟ್ ನೋಡಿಕೊಂಡು ಮಾಡುತ್ತಾನೆ. ಅದಕ್ಕೆ ಒಂದು ಎಕರೆ ಸಾಕು, 68 ಎಕ್ಕರೆ ಏಕೆ ಮಾಡುತ್ತೀರಾ; ಬಡಜನರು ಇದ್ದಾರೆ ಅನ್-ಆಥಾರೆಸ್ಡ್ ಇರುವವರಿಗೆಲ್ಲಾ ನೀವು ಅಕ್ರಮವನ್ನು ಸಕ್ರಮ ಮಾಡಲೇಬೇಕು ಎಂದು ಹೇಳುತ್ತೀರಿ, ಸರ್ಕಾರಿ ಜಮೀನು ಇದ್ದರೆ ಏನು ಅದೆಲ್ಲವನ್ನೂ ಅವರಿಗೆ ಕೊಟ್ಟು ಬಿಡುವುದೇ; ಕೊಡಬೇಡಿ ಏಕೆ ಕೊಡುತ್ತೀರಿ ದಯವಿಟ್ಟು ಇದನ್ನು ರೀಕನ್‌ಸಿಡರ್ ಮಾಡಿ, ಹೀಗೆ ಅವರಿಗೆ ಎಷ್ಟುಬೇಕು ಅಷ್ಟು ಕೊಡಿ ನನ್ನದೇನೂ ಅಭ್ಯಂತರ ಇಲ್ಲ. ಅವನದ್ದೇ 18 ಎಕರೆ ಇದ್ದ ಮೇಲೆ, ಏಕೆ ಕೊಡುತ್ತೀರಿ?

ಶ್ರೀ ಆರ್.ವಿ.ದೇಶಪಾಂಡೆ: ಯಾವಾಗ ಆ ಫೈಲ್ ಪುಟ್‌ಆಫ್ ಆಯಿತು, ಆವಾಗ ನಾನೇ ಹೇಳಿದೆ, ಒಂದು ಮಿನರಲ್ ವಾಟರ್ ಪ್ರಾಜೆಕ್ಟ್ ಇದೆ 68 ಎಕರೆ ಕೊಡುವ ಅವಶ್ಯಕತೆ ಇಲ್ಲ ಎಂದು; ನಾನೇ ಈ ಪ್ರಶ್ನೆಯನ್ನು ಕೇಳಿದೆ. ಹಾಗಾಗಿ ನಮ್ಮ ಕಮಿಷನರ್ ಆಫ್ ಇಂಡಸ್ಟ್ರೀಸ್‌ಗೆ ಡೈರೆಕ್ಷನ್ ಕೊಟ್ಟಿದ್ದೇನೆ, ಒಂದನೆ ತಾರೀಖಿಗೆ ಹೋಗಿ ಭೇಟಿ ಮಾಡಿ ನನಗೆ ವರದಿಯನ್ನು ಕೊಡಿ, ಇವರ ಭೂಮಿ ಆಡಿಟ್ ಮಾಡಿ ಪ್ರಾಜೆಕ್ಟ್ ರಿಪೋರ್ಟ್ ಕೊಡಿ, ಇವರಿಗೆ ಎಷ್ಟು ಅವಶ್ಯಕತೆ ಇದೆ, ಅಷ್ಟನ್ನು ಕೊಡುವುದು. ಆದರೆ ಮಾನ್ಯ ಬಾಲಕೃಷ್ಣರವರ ಸಂದೇಹ ಬೇರೆ ಇದೆ. ಅಲ್ಲಿ ಬಡ ರೈತರಿದ್ದಾರೆ ಅವರ ಭೂಮಿಯನ್ನು ಅತಿಕ್ರಮಣ ಮಾಡಿದ್ದಾರೆ, ಪೊಲ್ಯುಷನ್ ಕಂಟ್ರೋಲ್ ಬೋರ್ಡ್‌ನವರ ಕ್ಲಿಯರನ್ಸ್ ಬೇಕು ಎಂಬುದು. ಇದು ಯೋಗ್ಯವಾದ ಸಲಹೆ ಇದೆ. ನಿರ್ದೇಶಕರು ಭೇಟಿ ಕೊಟ್ಟು ಆದಮೇಲೆ ಮುಖ್ಯವಾಗಿ ಈ ಪ್ರಾಜೆಕ್ಟ್‌ನ್ನು ಮಾಡುವುದೇ ಬೇಡವೆ ಎಂದು ನಿರ್ಣಯ ತೆಗೆದುಕೊಳ್ಳಲಾಗುವುದು. ಮಾಡಬೇಕಾದಾಗ ಕನಿಷ್ಟ ಅವರಿಗೆ ಎಷ್ಟು ಭೂಮಿ ಬೇಕು ಎಂದು ನಿರ್ಣಯ ತೆಗೆದುಕೊಳ್ಳಲಾಗುವುದು. ಮಾಡಬೇಕಾದಾಗ ಕನಿಷ್ಟ ಅವರಿಗೆ ಎಷ್ಟು ಭೂಮಿ ಬೇಕು ಅಷ್ಟನ್ನೇ ಕೊಡುತ್ತೇವೆ. Subject to the clearance by the Pollution Control Board.

ಶ್ರೀ ಎಚ್.ಎನ್.ನಂಜೇಗೌಡ: ಆ ಖಾಸಗಿಯವರದ್ದೇ ಈಗಾಗಲೇ 18 ಎಕರೆ ಇದೆ.

ಶ್ರೀ ಆರ್.ವಿ.ದೇಶಪಾಂಡೆ: ಈಗಾಗಲೇ ಅವರು ಕೆಲವು ಜಮೀನನ್ನು ಖರೀದಿ ಮಾಡಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಐದು ಎಕರೆ ಜಮೀನನ್ನು ಖರೀದಿ ಮಾಡಿದ್ದಾರೆ. ಹಾಗಾಗಿ ನಾನು ಭೇಟಿ ಮಾಡಿ ಎಂದು ಹೇಳಿದ್ದೇನೆ? ಅದರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಸ್.ಯಡಿಯುರಪ್ಪ: ಇದು ಮಿನರಲ್ ವಾಟರ್ ತಯಾರು ಮಾಡುವುದು ಅಲ್ಲ, ಲ್ಯಾಂಡ್ ಗ್ಯ್ರಾಂಟಿಂಗ್ ಸ್ಕೀಮ್ ಇದು. ನನಗೆ ಗೊತ್ತಿರುವ ಪ್ರಕಾರ ಅನೇಕ ಜನರು ವಿದ್ಯಾವಂತರಿದ್ದಾರೆ, ನಮಗೆ ಗೊತ್ತಿರುವ ಹಾಗೆ ಇಂಡಸ್ಟ್ರೀಯವರು ಒಂದು ಎಕರೆ ಎರಡು ಭೂಮಿಯನ್ನು ಕೊಂಡುಕೊಳ್ಳುತ್ತಾರೆ. ಅವನು ಮಿನರಲ್ ವಾಟರ್ ತಯಾರು ಮಾಡಬೇಕಾದರೆ ಒಂದೆರಡು ಎಕರೆ ಖರೀದಿಸುತ್ತಾನೆ ಅದನ್ನು ಪ್ರಾರಂಭಮಾಡುತ್ತಾನೆ. ಸರ್ಕಾರ ಕೊಡುವುದಾಗಲಿ ಸ್ವಾಧೀನಪಡಿಸಿಕೊಳ್ಳುವುದಾಗಲಿ, ಸರ್ಕಾರಿ ಜಮೀನು ಕೊಡುವುದನ್ನು ನಿಮ್ಮ ಅಧಿಕಾರಿಗಳು ಯಾವ ದಿಕ್ಕಿನಲ್ಲಿ ಯೋಚನೆ ಮಾಡುತ್ತಿದ್ದಾರೆ ಎಂದು ಗೊತ್ತಿದ್ದೂ ನಾವು ಪ್ರಸ್ತಾಪ ಮಾಡುತ್ತಿದ್ದೇವೆ, ಇಲ್ಲದಿದ್ದರೆ 60-70 ಎಕರೆ ಜಮೀನನ್ನು ಅವರ ಜೊತೆ ಶಾಮೀಲಾಗಿ ಮುಳಗಿಸಿ ಬಿಡುತ್ತಿದ್ದ. ಏನು ನಡೆದಿದೆ ಇಲ್ಲಿ? ಎಲ್ಲೆಲ್ಲಿ ಭೂಮಿ ಇದೆ ಅದನ್ನು ಲೂಟಿ ಮಾಡುವ ವ್ಯವಹಾರ ನಡೆಯುತ್ತಿದೆ ಎನ್ನುವುದಾದರೆ ನೀವು ಅವರಿಗೆ ಮೊದಲು ವಾರನ್ ಮಾಡಿ ಆ ಅಧಿಕಾರಿಗೆ ನಿನ್ನ ತಲೆ ಸರಿ ಇದೆಯಾ ಎಂದು ಕೇಳಿ. ಈ ಮಿನರಲ್ ವಾಟರ್ ಮಾಡಲು ಎರಡು ಎಕರೆಯಾದರೆ ಸಾಕು ಅಷ್ಟನ್ನು ಅವನು ಕೊಂಡುಕೊಳ್ಳುತ್ತಾನೆ. ಸಬ್ಸಿಡಿ ಕೊಡುತ್ತೇವೆ, ಇನ್ಸೆಂಟೀವ್ ಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ್ ಖರ್ಗೆ: ಭೂಸುಧಾರಣೆ ಕಾನೂನನ್ನು ತಿದ್ದುಪಡಿಗೆ ತಂದ ಉದ್ದೇಶವೇ ಇದು. ಏಕೆಂದರೆ ಒಂದು ಅಪ್ಲಿಕೇಷನ್ ಬರೆದು 10 ಅಥವಾ 20 ಎಕರೆ ಬೇಕು ಎಂದು ಬರೆದು ಕೊಟ್ಟರೆ ಸಾಕು 20 ಎಕರೆ ಮಂಜೂರು ಮಾಡುವುದು. ಅದಕ್ಕೆ ನಾವು ಬಡಕೊಂಡೆವು ಇದು ದುರುಪಯೋಗವಾಗುತ್ತದೆ, ನೀವು ಸರ್ಕಾರದವರು ಡಿಸ್ಕ್ರೆಷನ್ ಇಟ್ಟಿಕೊಂಡು ನೀವು ಜ್ಯುಡಿಷಿಯಸ್ ಆಗಿ ಡಿಸ್ಕ್ರೆಷನ್ ಉಪಯೋಗ ಮಾಡಿದ್ದರೆ ಒಳ್ಳೆಯದಾಗುತ್ತದೆ. ಇಲ್ಲದೆ ಇದ್ದರೆ ಹಣವಂತ ಬ್ಲಾಕ್‌ಮನಿ ಇದ್ದವನು ಸಾಕಷ್ಟು ಭೂಮಿಯನ್ನು ಖರೀದಿ ಮಾಡುತ್ತಾನೆ. ಮುಂದೆ ನಾವೆಲ್ಲಾ ಬಾಯಿ ಬಡೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಈಗಲಾದರೂ ನೀವು ಅದರ ಮೇಲೆ ಪರಿಶೀಲನೆ ಮಾಡುವ ಅವಶ್ಯಕತೆ ಇದೆ.

ಡಾ: ಎಚ್.ಸಿ.ಬಾಲಕೃಷ್ಣ: ಕ್ಲೀಯರನ್ಸ್ ಬಂದ ಮೇಲೆ ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಲ್ಲಿ ಸ್ವಾಧೀನಪಡಿಸಿಕೊಂಡು ಜಮೀನು ಅವರ ಅಧಿಸೂಚನೆಯಲ್ಲಿ ಇದೆ. ಚಕ್ ಬಂದ್

ಹಾಕಿದ್ದಾರೆ ಪಶ್ಚಿಮಕ್ಕೆ, ನೀರು ಮುಳುಗುವ ಪ್ರದೇಶ ಎಂದು. ಅಂದರೆ ಅಲ್ಲಿ ಮಂಚನಬೆಲೆ ಜಲಾಶಯ ಬರುತ್ತದೆ. ಆ ನೀರು ಕಲುಷಿತವಾಗುತ್ತದೆ. ಅದರಿಂದ ಮಾನ್ಯ ಮಂತ್ರಿಗಳಿಗೆ ದಯಮಾಡಿ ಹೇಳುತ್ತೇನೆ ಅದನ್ನು ಕೈಬಿಡಬೇಕು ಎಂದು. ಇಲ್ಲದಿದ್ದರೆ ಕುಡಿಯುವ ನೀರಿಗೂ ತೊಂದರೆಯಾಗುತ್ತದೆ. ಬಡರೈತರಿಗೂ ತೊಂದರೆ ಯಾಗುತ್ತದೆ.

ಶ್ರೀ ಎಚ್.ಎನ್.ನಂಜೇಗೌಡ: ಭೂಮಿ ಸ್ವಾಧೀನ ಮಾಡಿಕೊಳ್ಳಬೇಕಾದರೆ, ಪಬ್ಲಿಕ್ ಪರ್ಪಸ್ ಇರಬೇಕು. What public purpose would be served by opening a mineral water factory by a private man? ಈಗ ನೀವು ಸ್ವಾಧೀನ ಏಕೆ ಮಾಡಿಕೊಳ್ಳುತ್ತೀರಿ ಎಂದು ಒಂದು ಪಾಲಿಸಿನಾದರೂ ಹೇಳಿ. ಪಬ್ಲಿಕ್ ಪರ್‌ಪಸ್ ಎಂದರೆ ಏನು, ಇಲ್ಲಿ ಯಾರೋ ಖಾಸಗಿ ವ್ಯಕ್ತಿ ಬಂದು ಮಿನರಲ್ ವಾಟರ್ ಮಾಡುವುದು ಪಬ್ಲಿಕ್ ಪರ್‌ಪಸ್ ಇರುತ್ತದೆಯೆ? ಏಕೆಂದರೆ ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕಾದರೆ there should be some public purpose. ದಯವಿಟ್ಟು ಇದನ್ನು ನೋಡಿ ಯೋಚನೆ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ: ಸದನಕ್ಕೆ ಬರುವುದಕ್ಕಿಂತ ಮುಂಚೆ ನಾನು ಡೈರೆಕ್ಟರ್‌ಗೆ ಸೂಚನೆ ಕೊಟ್ಟಿದ್ದೇನೆ, ಹೋಗಿ ನೋಡಿಕೊಂಡು ಬನ್ನಿ ಎಂದು. ನೋಡಿಯಡಿಯೂರಪ್ಪನವರೇ, ಸರ್ಕಾರದಲ್ಲಿ ನಿಮಗೆ ಇನ್ನು ಅನುಭವ ಇಲ್ಲ; ನೀವು ಇಲ್ಲಿ ಬಂದು ನೋಡಿ; ಒಂದು ಕಡತದ ಮೇಲೆ ನಿರ್ಣಯ ತೆಗೆದುಕೊಳ್ಳಬೇಕಾದರೆ ವಿಚಾರಣೆ ಮಾಡಬೇಕಾಗುತ್ತದೆ. ನಾಳೆ ಅವರೂ ಸಹ ನಮ್ಮ ವಿರೋಧ ನ್ಯಾಯವಾಗಿ ಕ್ರಮತೆಗೆದುಕೊಳ್ಳಬಾರದು. ಆದ್ದರಿಂದ ಪ್ರಾಜೆಕ್ಟ್ ಬಗ್ಗೆ ಅಭ್ಯಾಸ ಮಾಡಿ ಫೈಲ್ ರೆಡಿ ಮಾಡಬೇಕಾಗುತ್ತದೆ. ಹಾಗಾಗಿ ಒಂದು ಭರವಸೆಯನ್ನು ಕೊಡುತ್ತೇನೆ ಇದರಿಂದ ರೈತರಿಗೆ ತೊಂದರೆಯಾಗುವುದಿಲ್ಲ, ಕುಡಿಯುವ ನೀರಿಗೂ ತೊಂದರೆಯಾಗಬಾರದು.

ಶ್ರೀ ಬಿ.ಎಸ್.ಯಡಿಯುರಪ್ಪ: ದಯಮಾಡಿ ಕ್ಷಮಿಸಿ, ನಮ್ಮ ಪಾಯಿಂಟ್ ಅದು ಅಲ್ಲ, ನಾವು ಏಕೆ ಇದನ್ನು ಇಷ್ಟು ದೀರ್ಘ್‌ವಾಗಿ ಎಳೆಯುತ್ತಿದ್ದೇವೆ ಎಂದರೆ, ಒಂದು ಸಾರಿ ಸಿಗ್ನಲ್ ಹೋಗಲಿ ರಾಜ್ಯದ ಜನತೆಗೆ, ಈ ತರಹ ಭೂಮಿ ಗ್ರಾಂಟಿಂಗ್ ಅವಕಾಶ ಕೊಡುವುದಿಲ್ಲ, ಇಂಡಸ್ಟ್ರೀ ಮಾಡಬೇಕೆಂದು ಪ್ರೈವೆಟ್‌ನವನು ಬಂದರೆ, ನಾವು ಅದಕ್ಕೆ ಏನು ಬೇಕು ಆ ಅನುಕೂಲ ಮಾಡಿಕೊಡುತ್ತೇವೆ. ಜಮೀನು ಕೊಂಡುಕೊಳ್ಳಬೇಕು ಅವನು ವ್ಯವಹಾರ ನಡೆಸಬೇಕು. ಸರ್ಕಾರದ ಜಮೀನು ಇರಬಹುದು, ಖಾಸಗಿಯವರದ್ದು ಇರಬಹುದು. ಸ್ವಾಧೀನಪಡಿಸಿಕೊಳ್ಳುವ ಕೆಲಸ ನಿಮ್ಮದು ಅಲ್ಲ, ಅವನು ಬದುಕಬೇಕೆಂದರೆ ಬೇರೆ ದಾರಿ ಇದೆ ಅವನು ಮಾಡಿಕೊಳ್ಳಲಿ, ಇದನ್ನು ಯಾವ ಅಧಿಕಾರಿ ಪ್ರಪ್ಪೊಸ್ ಮಾಡಿದ್ದಾನೆ, ಹೀಗೆ ಗೊತ್ತಿಲ್ಲದೆ ನೂರಾರು ಘಟನೆಗಳು ನಡೆದಿವೆ. ಇಲ್ಲಿ ಗೊತ್ತಿದೆ ಎಂದು ಪ್ರಸ್ತಾಪ ಮಾಡುತ್ತಿದ್ದಾರೆ. ತನಿಖೆ ಮಾಡಿಸುತ್ತಿದ್ದೀರಿ. ಈಗ ನಿಮಗೆ ಹತ್ತು ಉದಾಹರಣೆಗಳನ್ನು ನಿಮಗೆ ಕೊಡುತ್ತೇನೆ, ಈಗ ನೀವು ಅಧಿಕಾರಿಯ

ಮೇಲೆ ಕ್ರಮತೆಗೆದುಕೊಳ್ಳಬೇಕು. ಮತ್ತು ಇದನ್ನು ಡ್ರಾಪ್ ಮಾಡಿ.

ಶ್ರೀ ವಿ.ಆರ್.ದೇಶಪಾಂಡೆ: ಸಿಂಗಲ್ ವಿಂಡೋ ಏಜನ್ಸಿ ಕ್ಲಿಯರ್ ಆದ ನಂತರ ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಕೂಡ ಅಕ್ವಯರ್ ಮಾಡುತ್ತಿದೆ. It is still in the initial stages. ನಾನು ತಮಗೆ ಭರವಸೆ ಕೊಡುತ್ತೇವೆ. ಇಷ್ಟು ಜಮೀನನ್ನು ಕೊಡಲು ಸಾಧ್ಯವಿಲ್ಲ. ನಾನು ಒಪ್ಪಿಕೊಳುತ್ತೇನೆ. ನನಗೂ ಗೊತ್ತಿದೆ ಮಿನರಲ್ ವಾಟರ್‌ಗೆ ಎಷ್ಟು ಬೇಕು ಎಂದು, ಒಂದು ವೇಳೆ ಪ್ರಾಜೆಕ್ಟ್ ಬರಬೇಕಾದರೂ ಸಹಿತ ಅಲ್ಲಿಯ ರೈತರ ಹಿತ, ಕುಡಿಯುವ ನೀರು, ಈ ಯಾವುದಕ್ಕೂ ಪರಿಣಾಮ ಬರದ ಹಾಗೆ ಮಾಡುತ್ತೇವೆ. If there is any pollution problem from this project, I will see that the project is also cancelled.

(INTERRUPTIONS)

ಶ್ರೀ ಎಸ್.ಸುರೇಶ್‌ಕುಮಾರ್: ಸನ್ಮಾನ್ಯ ಉಪಾಧ್ಯಕ್ಷರೆ, the very thinking is wrong. ಅವರೆ ಹೇಳಿದ್ದಾರೆ ಒಂದು ಎಕರೆ ಸಾಕು ಎಂದು. ಸರ್ಕಾರಕ್ಕೂ ಇದಕ್ಕೂ ಏನು ಸಂಬಂಧ ಸ್ವಾಮಿ? You have got many better things to do. ನೀವು ಏಕೆ acquisition proceedings ಮಾಡಲು ಶುರು ಮಾಡಿದ್ದೀರಾ?

ಶ್ರೀ ಆರ್.ವಿ.ದೇಶಪಾಂಡೆ: ನಾನು ಯೋಗ್ಯವಾದ ನಿರ್ಣಯವನ್ನು ತೆಗೆದು ಕೊಳ್ಳುತ್ತೇನೆ. I have already ordered the Director of Industries to go there. You leave the problem to me. Please keep faith in the Government. ನಾವು ಯಾರಿಗೂ ಅನ್ಯಾಯ ಮಾಡುವುದಿಲ್ಲ. 60 ಎಕರೆ ಮಿನರಲ್ ವಾಟರ್‌ಗೆ ಅವಶ್ಯಕತೆ ಇಲ್ಲ ಎಂಬುದು ಗೊತ್ತು. I fully agree with you.

ಶ್ರೀ ಎಚ್.ಸಿ.ಬಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಗಮನವನ್ನು ಕೊಡಬೇಕು. ಈಗ ತಹಸಿಲ್ದಾರವರು ರಿರ್ಪೊಟ್ ಕೇಳಿದ್ದಾರೆ ಡೆಪ್ಯುಟಿ ಕಮೀಷನರ್‌ರಿಂದ ಮತ್ತು ಇಲಾಖೆಯಿಂದ, ಆದರೆ ತಹಶೀಲ್ದಾರ್ ಇಲ್ಲಿ ಆಗುವುದಿಲ್ಲ ಎಂದು ಎನ್‌ಒಸಿ ಕೊಟ್ಟಿಲ್ಲ, ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಕಡೆ ಗಮನ ಕೊಡಬೇಕೆಂದು ತಮ್ಮ ಮೂಲಕ ಮಂತ್ರಿಗಳಿಗೆ ಅದನ್ನು ಕೊಡಲು ಇಷ್ಟಪಡುತ್ತೇನೆ.

ಉಪಾಧ್ಯಕ್ಷರು: ಈಗ ಬೇಡಿಕೆ ಮೇಲೆ ಚರ್ಚೆ. ಕುಂಬ್ಳೆ ಸುಂದರರಾಯರು ಮಾತನಾಡಿ.

ಶ್ರೀ ಬಿ.ಎಸ್.ಯಡಿಯುರಪ್ಪ: ನಾವು ರೂಲ್ 69ರಡಿಯಲ್ಲಿ ಎರಡು ವಿಷಯಗಳನ್ನು

ಚರ್ಚೆಗೆ ಕೊಟ್ಟಿದ್ದೇವೆ. ನಾವು ಬೇಕಾದರೆ ಬೇಡಿಕೆ ಮೇಲೆ ಮೂರ್ನಾಲ್ಕು ದಿವಸಗಳ ಚರ್ಚೆ ಮಾಡೋಣ. ಆಗ ಬೇರೆ ವಿಚಾರಗಳನ್ನು ಹಾಕಿಕೊಳ್ಳುವುದೇ ಬೇಡ. ಈಗ ನಿಯಮ 69ರಡಿಯಲ್ಲಿ ಎರಡು ವಿಷಯಗಳನ್ನು ಅರ್ಧರ್ಧ ಗಂಟೆಯೊಳಗೆ ಮುಗಿಸಬಿಡಿ. ನಾವು ಡಿಮ್ಯಾಂಡ್ ಮೇಲೆ ಚರ್ಚೆಗೆ ರಾತ್ರಿ 8 ಗಂಟೆಯವರೆಗೆ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ನಾಳೆ ಕಾರ್ಯಕಾರಿ ಸಲಹಾ ಸಮಿತಿಯಲ್ಲಿ ಮಾತನಾಡಿ ಬೇಡಿಕೆ ಮೇಲೆಯೇ ಚರ್ಚೆ ಮಾಡಲು ಕೆಲವು ದಿವಸಗಳನ್ನು ನಿಗಧಿಪಡಿಸುವ ಬಗ್ಗೆ ಆ ದಿವಸಗಳಲ್ಲಿಬೇರೆ ಕಾರ್ಯಕಲಾಪಗಳನ್ನು ಇಟ್ಟುಕೊಳ್ಳದಿರುವ ಬಗ್ಗೆ ಮಾತನಾಡೋಣ. ದಯವಿಟ್ಟು ಈಗ ನಿಯಮ 69ರಡಿಯಲ್ಲಿ ಎರಡು ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಈಗಾಗಲೇ ಅಧ್ಯಕ್ಷರು ಒಂದು ಅಜೆಂಡಾ ಮಾಡಿ ಆ ಪ್ರಕಾರ ಕಲಾಪ ನಡೆಸಲು ಅದನ್ನು ಕೊಟ್ಟು ಹೋಗಿದ್ದಾರೆ. ಆ ಪ್ರಕಾರವೇ ಹೋಗೋಣ. ನಾಳೆ ಬೇಕಾದರೆ ಇದರ ಬಗ್ಗೆ ಮತ್ತೊಮ್ಮೆ ಕುಳಿತು ಈ ಬಗ್ಗೆ ನಿರ್ಣಯ ಮಾಡೋಣ.

ಶ್ರೀ ಬಿ.ಎಸ್.ಯಡಿಯುರಪ್ಪ: ನಿನ್ನೆ ಮತ್ತು ಮೊನ್ನೆ ಕೂಡ ಡಿಮ್ಯಾಂಡ್ ಬಗ್ಗೆ ಚರ್ಚೆ ಇದ್ದಾಗ ನಿಯಮ 69ನ್ನು ಚರ್ಚೆಗೆ ತೆಗೆದುಕೊಳ್ಳಲಾಗಿತ್ತು. ಅದೇ ಪ್ರಕಾರ ಇವೊತ್ತು ತಾವು ಅಧ್ಯಕ್ಷ ಪೀಠದಲ್ಲಿ ಕುಳಿತುಕೊಂಡಿರುವುದರಿಂದ ನಾವು ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ. ನಿಯಮ 69ಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು: ಈ ರೀತಿ ಮಾಡೋಣ. ಮೊದಲು ಬೇಡಿಕೆ ಮೇಲೆ ಒಂದಿಬ್ಬರು ಮಾತನಾಡಲಿ ನಂತರ ರೂಲ್ 69 ತೆಗೆದುಕೊಳ್ಳೋಣ. ಆಗ ಅಜೆಂಡಾ ಪ್ರಕಾರ ಹೋದ ಹಾಗೂ ಆಗುತ್ತದೆ. ಈಗ ಕುಂಬ್ಳೆ ಸುಂದರರಾಯರು ಮಾತನಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಉಪಾಧ್ಯಕ್ಷರೇ, ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಮಧ್ಯದಲ್ಲಿ ನಿಲ್ಲಿಸುವುದಕ್ಕೆ ಬರುವುದಿಲ್ಲ. ಆದುದರಿಂದ ನಾಳೆ ರೂಲ್ 69 ತೆಗೆದುಕೊಳ್ಳುತ್ತೀರ?

ಉಪಾಧ್ಯಕ್ಷರು: ಆಯಿತು. ನಾಳೆ ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ವಂದನೆಗಳು.

ವಿತ್ತೀಯ ಕಾರ್ಯಕಲಾಪಗಳು.

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಕುಂಬ್ಳೆ ಸುಂದರರಾಯರು: ಮಾನ್ಯ ಉಪಾಧ್ಯಕ್ಷರೆ, ನಾನು ಮೊಟ್ಟಮೊದಲನೆಯದಾಗಿ ಪ್ರವಾಸೋದ್ಯಮ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ